C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 102/2022

**ಚಾ.ಸಾ.–02 ಪ್ರಾ.ಸಾ.–03**

| | |
|---|---|
| **ಸಾಕ್ಷಿದಾರರ ಹೆಸರು** | **ಕುಮಾರ** |
| **ತಂದೆಯ ಹೆಸರು** | **ಲೇಟ್ ಪಾಪಣ್ಣ** |
| **ವಯಸ್ಸು** | **48 ವರ್ಷಗಳು** |
| **ಉದ್ಯೋಗ** | **ವ್ಯವಸಾಯ** |
| **ವಾಸ** | **ಬೀರಶೆಟ್ಟಿಹಳ್ಳಿ ಗ್ರಾಮ, ಪಾಂಡವಪುರ ತಾಲ್ಲೂಕು** |

**ದಿನಾಂಕಃ 18.10.2025 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ- 1, 3 ನನ್ನ ತಮ್ಮಂದಿರು. ಚಾಸಾ- 4 ನನ್ನ ಅಣ್ಣ. ನಾವು ಪರಿಶಿಷ್ಟ ಜಾತಿಯ ಮಾದಿಗ ಜನಾಂಗಕ್ಕೆ ಸೇರಿದವರು. ಚಾಸಾ- 5, 6, ರವರ ಪರಿಚಯ ನನಗೆ ಇದೆ. ಅವರು ನಮ್ಮ ಜೊತೆ ಕೆಲಸ ಮಾಡುತ್ತಿದ್ದರು. ಚಾಸಾ- 7, 8, 9, 10 ರವರು ನನಗೆ ಗೊತ್ತಿಲ್ಲ.

2. ಈ ದಿನ ನ್ಯಾಯಾಲಯದ ಮುಂದಿರುವ 1, 2, 4 ಮತ್ತು 5 ನೇ ಆರೋಪಿತರ ಪರಿಚಯ ನನಗೆ ಇದೆ. (Witness identified accused Nos. 1, 2, 4 and 5 in the dock). 3ನೇ ಆರೋಪಿ ರವರ ಪರಿಚಯ ಕೂಡ ನನಗೆ ಇದೆ. (learned Counsel for Accused submits that there is no identity dispute with respect to accused No.3). ಅವರು ಒಕ್ಕಲಿಗ ಜಾತಿಗೆ ಸೇರಿದವರು.

**3.** 2022 ರಲ್ಲಿ ಒಂದು ದಿನ ದೇವೇಗೌಡನಕೊಪ್ಪಲುವಿಗೆ ನಾವು ಸುಮಾರು 16 ಜನ ಕಾಂಕ್ರೀಟ್ ಕೆಲಸಕ್ಕೆಂದು ಬೆಳಿಗ್ಗೆ 7.00 ಗಂಟೆಯಿಂದ 5.00 ಗಂಟೆಯವರಗೆ ಕೆಲಸ ಹೋಗಿದ್ದೆವು. 2ನೇ ಆರೋಪಿಯ ಕಟ್ಟಡದ 3ನೇ ಹಂತದ ತಾರಸಿ ಕಾಂಕ್ರೀಟ್ ಮಾಡಲು ಹೋಗಿದ್ದೆವು. 65 ಮೂಟೆ ಸೀಮೆಂಟ್ ಕಲಸಿ ಕಾಂಕ್ರೀಟ್ ಹಾಕಿದೆವು. ಸಂಜೆ 5.00 ಗಂಟೆಗೆ ಕೆಲಸ ಮುಗಿಯಿತು. ಚಾಸಾ-1 ನಮ್ಮನ್ನು ಕೆಲಸಕ್ಕೆ ಅಲ್ಲಿಗೆ ಕರೆದುಕೊಂಡು ಹೋಗಿರುತ್ತಾರೆ. ಚಾಸಾ-1 ರವರನ್ನು ಸದರಿ ಕಟ್ಟಡಕ್ಕೆ ಗಾರೆ ಮೇಸ್ತ್ರಿರವರು ಕರೆಸಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. 2ನೇ ಆರೋಪಿ ಸುರೇಶರವರು ನನ್ನನ್ನು ಕೆಲಸಕ್ಕೆ ಅಲ್ಲಿಗೆ ಕರೆದಿರುವುದಿಲ್ಲ. ಚಾಸಾ- 1 ರವರು ಸಿದ್ದೇಗೌಡ ಎನ್ನುವವರ ಹೆಂಡತಿಯ ಬಳಿ ಕೆಲಸ ಮಾಡಿದ ಕೂಲಿಯನ್ನು ಕೇಳಿದರು. ಕೂಲಿಯನ್ನು ಕೇಳಿದಾಗ ಅಷ್ಟರಲ್ಲಿ ಆರೋಪಿ 1, 2 ಮತ್ತು ಸಿದ್ದೇಗೌಡ ಎನ್ನುವವರು ಜಗಳಕ್ಕೆ ಬಂದರು. ಚಾಸಾ-1 ರವರು ಜೊತೆಗೆ ಅವರು ಉಲ್ಟಾ ಮಾತನಾಡಿದರು. ಆ ಸಮಯ ಚಾಸಾ-1 ಮೊಬೈಲಿನಿಂದ ವೀಡಿಯೋ ಮಾಡಿದರು. ಚಾಸಾ-1 ರವರ ಮೊಬೈಲ್ ಪೋನನ್ನು ಆರೋಪಿ 1, 2 ಮತ್ತು ಸಿದ್ದೇಗೌಡ ಕಿತ್ತುಕೊಂಡರು. ಆರೋಪಿ 1, 2 ರವರು ದೊಣ್ಣೆಯಿಂದ ನನ್ನ ತಲೆಗೆ ಹೊಡೆದರು. ಕಬ್ಬಿಣದ ರಾಡಿನಿಂದ ಚಾಸಾ- 4 ರವರಿಗೆ ಆರೋಪಿ 1 ಮತ್ತು 2 ರವರು ಕೈಗೆ ಚುಚ್ಚಿದರು. ನಂತರ ಪಾಂಡವಪುರ ಸರ್ಕಾರಿ ಆಸ್ಪತ್ರೆಗೆ ನಾನು, ಚಾಸಾ- 1 ಚಿಕಿತ್ಸೆಗೆ ಹೋದೆವು. ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರು ಹಲ್ಲೆ ಮಾಡಿರುವುದು ಬಿಟ್ಟು ಬೇರೆ ಏನು ಮಾಡಿರುವುದಿಲ್ಲ. ಅವರು ಇದಲ್ಲದೆ ಬೇರೆ ಏನಾದರು ಮಾಡಿರುತ್ತಾರೆ ಎಂದು ನಾನು ಪೋಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಆರೋಪಿತರು ನಮಗೆ ಹಲ್ಲೆ ಮಾಡಿದ ಕಬ್ಬಿಣದ ರಾಡು ಮತ್ತು ದೊಣ್ಣೆಯನ್ನು ಗುರುತಿಸಬಲ್ಲೆ. ನನಗೆ ಈಗ ತೋರಿಸಿದ ಎಂಒ–1 ರಿಂದ 3 ದೊಣ್ಣೆಗಳು ಮತ್ತು ಕಬ್ಬಿಣದ ರಾಡು ಅದೇ ಆಗಿರುತ್ತದೆ. ಚಾಸಾ- 1 ರವರ ಮೊಬೈಲ್ ಪೋನನ್ನು ಗುರುತಿಸಬಲ್ಲೆ. ಅದನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಎಂಒ–5 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ</u>**

**4.** ದಿಃ25.02.2022 ರಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ದಿಃ25.01.2022 ರಂದು ಸಂಜೆ 5.00 ಗಂಟೆಗೆ ಕೆಲಸ ಮುಗಿದ ನಂತರ ಹಣದ ವಿಚಾರದಲ್ಲಿ ಆರೋಪಿತರು ನಮ್ಮ ಜೊತೆಗೆ ಜಗಳ ಮಾಡಿದ್ದಲ್ಲದೆ ಮಾದಿಗನನ್ನ ಮಕ್ಕಳ, ಬಡ್ಡಿ ಮಕ್ಕಳಾ, ಸೂಳೆ ಮಕ್ಕಳ ಎಂದು ಬೈದರು ಎಂದರೆ ಸರಿ. ನಂತರ ಆರೋಪಿತರು ನಿಮ್ಮ ಜಾತಿಗೆ ಬೆಂಕಿ ಹಾಕ ಎಂದು ಕಲ್ಲು ಎತ್ತಿಹಾಕಿ ನನ್ನನ್ನು ಸಾಯಿಸುತ್ತೇನೆ ಎಂದು ಬಂದರು ಎಂದರೆ ಸರಿ. ಸದರಿ ಸೈಜುಗಲ್ಲನ್ನು ಈಗ ನೋಡುತ್ತಿದ್ದೇನೆ ಎಂದರೆ ಸರಿ. ಅದನ್ನು ಈಗಾಗಲೇ ಎಂಒ–4 ಎಂದು ಗುರುತಿಸಲಾಗಿದೆ. ನಾವು ಚಿಕಿತ್ಸೆ ಪಡೆಯಲು ಪಾಂಡವಪುರ ಸರ್ಕಾರಿ ಆಸ್ಪತ್ರೆಗೆ ಹೋದಾಗ ಆರೋಪಿತರು ಸದರಿ ಆಸ್ಪತ್ರೆ ಬಳಿ ಬಂದು ಎಂಎಲ್‌ಸಿ ಚೀಟಿಯನ್ನು ಹರಿದು ಹಾಕಿ ಪೋಲೀಸರಿಗೆ ದೂರು ಕೊಟ್ಟರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿ. ನಂತರ ನಾನು ಮತ್ತು ಚಾಸಾ- 1 ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಹೋಗಿದ್ದೆವು ಎಂದರೆ ಸರಿ. ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. 1 ಮತ್ತು 2 ಆರೋಪಿತರಲ್ಲದೆ ಉಳಿದ ಆರೋಪಿತರ ಹೆಸರು ಗೊತ್ತಾದ ನಂತರ ಆ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಎನ್.ವಿ ವಕೀಲರಿಂದ:</u>**

**5.** ನಾನು ನಮ್ಮ ಊರಿನಲ್ಲಿ ವ್ಯವಸಾಯ ಮಾಡಿ ಜೀವನ ಮಾಡುತ್ತಿದ್ದೇನೆ. ಚಾಸಾ- 1 ರವರು ಈ ಪ್ರಕರಣ ಅಲ್ಲದೇ ಬೇರೆ 2 – 3 ಜಾತಿ ನಿಂದನೆ ಮಾಡಿರುತ್ತಾರೆ ಎಂದು SC/ST PoA Act ಅಡಿ ದೂರು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣಗಳಲ್ಲಿಯೂ ಸಹಾ ನಾನು ಸಾಕ್ಷಿಯಾಗಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣಗಳಲ್ಲಿ ಸರ್ಕಾರದಿಂದ ಚಾಸಾ- 1 ರವರು ಪರಿಹಾರದ ಹಣವನ್ನು ಪಡೆದುಕೊಂಡಿರುತ್ತಾರೆ. ಈ ಪ್ರಕರಣದ ಬಾಬ್ತು ಚಾಸಾ- 1 ರವರು ಪರಿಹಾರದ ಹಣ ಪಡೆದುಕೊಂಡಿರುತ್ತಾರೆ. ನನಗೂ ಸಹಾ ರೂ.70,000/– ಸರ್ಕಾರದಿಂದ ಪರಿಹಾರದ ಹಣ ಬಂದಿರುತ್ತದೆ.

**6.** ಚಾಸಾ- 1 ನಮ್ಮ ಗ್ರಾಮದಲ್ಲಿ ನಮ್ಮ ಜಾತಿಯ ಮುಖಂಡರಾಗಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ- 1 ಹಲವಾರು ಸಂಘ ಸಂಸ್ಥೆಗಳಲ್ಲಿ ಭಾಗಿಯಾಗಿದ್ದಾರೆ ಎಂದರೆ

ಸರಿಯಲ್ಲ. 2ನೇ ಆರೋಪಿ ಮನೆ ಕಟ್ಟಲು ಪಾಂಡವಪುರದ ಬಾಬು ಎನ್ನುವ ಮೇಸ್ತ್ರಿಗೂ 2ನೇ ಆರೋಪಿಗೂ ಮಧ್ಯೆ ಮಾತುಕತೆಯಾಗಿರುತ್ತದೆ ಎಂದರೆ ಸರಿ. ಮನೆ ಕಟ್ಟಲು ಚದರಕ್ಕೆ ಇಷ್ಟು ಹಣ ಎಂದು 2ನೇ ಆರೋಪಿ ಸದರಿ ಬಾಬುರವರಿಗೆ ಹಣ ನೀಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗ ಆರ್ಥಿಕವಾಗಿ ಪ್ರಭಲರಾಗಿರುವವರು ಕಾಂಕ್ರೀಟ್ ಮಾಡಲು ಮಿಷಿನ್ ಬಳಸುತ್ತಾರೆ ಎಂದರೆ ಸರಿ. ಹಣ ಕಡಿಮೆ ಇರುವವರು ಆಳುಗಳಿಂದ ಕಾಂಕ್ರೀಟ್ ತಯಾರಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕೂಲಿಯ ಬಗ್ಗೆ ಚಾಸಾ- 1 ಮತ್ತು ಮೇಸ್ತ್ರಿ ಬಾಬುರವರ ಮಧ್ಯೆ ಮಾತುಕತೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿಃ25.01.2022 ರಂದು ನಡೆಯಬೇಕಿದ್ದ ಕಾಂಕ್ರೀಟ್ ಕೆಲಸಕ್ಕೆ ಕೂಲಿಯ ಬಗ್ಗೆ 2ನೇ ಆರೋಪಿ ಆಗಲೀ ಇನ್ನಿತರೆ ಆರೋಪಿತರಾಗಲೀ ನನ್ನ ಜೊತೆ ಮಾತುಕತೆ ಮಾಡಿರುವುದಿಲ್ಲ. ಚಾಸಾ- 1 ರವರ ಜೊತೆ ಮಾತುಕತೆ ಮಾಡಿರುತ್ತಾರೋ ಎಂದು ನನಗೆ ಗೊತ್ತಿಲ್ಲ. ಆ ದಿನ 2ನೇ ಆರೋಪಿಯ ಕುಟುಂಬದವರು ಕೂಲಿ ಕೆಲಸ ಮಾಡುವವರಿಗೆ ಸಂಜೆ ಹೊತ್ತು ಕೋಳಿ ಊಟವನ್ನು ಕೊಟ್ಟಿರುತ್ತಾರೆ. ಊಟ ಮಾಡುವ ಮುಂಚೆ ಒಂದಷ್ಟು ಜನ ಕೆಲಸಗಾರರು ಮದ್ಯಪಾನ ಮಾಡಿ ಊಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ಚಾಸಾ- 1 ರವರು 2ನೇ ಆರೋಪಿಯ ಹತ್ತಿರ ಕೂಲಿ ಕೇಳಿದರು ಎಂದರೆ ಸರಿಯಲ್ಲ. 2ನೇ ಆರೋಪಿ ಚಾಸಾ- 1 ರವರಿಗೆ ಹಣದ ಮಾತುಕತೆ ಬಾಬು ಮೇಸ್ತ್ರಿಯ ಜೊತೆ ಆಗಿರುತ್ತದೆ ಅವರಿಂದ ಹಣ ಪಡೆದುಕೊಳ್ಳಿ ಎಂದರೆ ನನಗೆ ಗೊತ್ತಿಲ್ಲ. ಆ ಸಮಯ ಬಾಬು ಮೇಸ್ತ್ರಿಗೆ ಪೋನ್ ಮಾಡಿದಾಗ ಅವರ ಪೋನ್ ಸ್ವಿಚ್ ಆಫ್ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅಲ್ಲಿಯವರೆಗೂ ಮಾಡಿರುವ ಕೆಲಸಕ್ಕೆ ಹಾಗೂ ಅದಕ್ಕಿಂತ ಹೆಚ್ಚು ಹಣವನ್ನು ಈಗಾಗಲೇ ಬಾಬು ಮೇಸ್ತ್ರಿಗೆ ನೀಡಿರುತ್ತೇವೆ ಎಂದು 2ನೇ ಆರೋಪಿ ಚಾಸಾ- 1 ರವರಿಗೆ ಹೇಳಿದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯ ಮದ್ಯಪಾನ ಮಾಡಿದ ಕೆಲಸಗಾರರು ಆ ದಿನ ಮಾಡಿದ್ದ ಕಾಂಕ್ರೀಟನ್ನು ಕೀಳಲು ಪ್ರಯತ್ನ ಮಾಡಿದರು ಎಂದರೆ ಸರಿಯಲ್ಲ. ದಿಃ25.01.2022 ರಂದು 2ನೇ ಆರೋಪಿಯ ಕಟ್ಟಡದ ಕೆಲಸಗಾರರಾಗಿ ನಾನು ಹೋಗಿರುವುದೇ ಇಲ್ಲ ಎಂದರೆ ಸರಿಯಲ್ಲ. ಚಾಸಾ- 1 ರವರಿಗೂ ಹಾಗೂ ನನಗೂ ಸರ್ಕಾರದಿಂದ ಹಣ ಪಡೆಯುವ ಸಲುವಾಗಿ ಕೆಲಸಕ್ಕೆ ಹೋಗಿದ್ದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2ನೇ ಆರೋಪಿತರು ಯಾವುದೇ ಮುದ್ದೆ ಮಾಲುಗಳಿಂದ ನನಗಾಗಲೀ ಚಾಸಾ- 1

ಅಥವಾ 4 ರವರಿಗಾಗಲೀ ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಆರೋಪಿತರು ನನಗಾಗಲೀ ನನ್ನ ಜೊತೆ ಇದ್ದವರಿಗಾಗಲೀ ಜಾತಿ ನಿಂದನೆ ಮಾಡಿರಲಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಗಲಾಟೆ ನಡೆದ ನಂತರ ಪೋಲೀಸರು ಸ್ಥಳಕ್ಕೆ ಸಂಜೆ 5.00 ಗಂಟೆಗೆ ಬಂದಿದ್ದರು. ಒಬ್ಬರು ಪೋಲೀಸರು ಬಂದಿದ್ದರು. ನಾವು ಹೋಗಿದ್ದ ಪಾಂಡವಪುರ ಸರ್ಕಾರಿ ಆಸ್ಪತ್ರೆಯಲ್ಲಿ ಸಿ ಟಿವಿ ಕ್ಯಾಮೇರಾಗಳು ಇವೆ. ಅಲ್ಲಿಯೂ ಆರೋಪಿತರು ಗಲಾಟೆ ಮಾಡಿ ಚೀಟಿ ಹರಿದು ಹಾಕಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**7.** ಚಾಸಾ- 1 ರವರು ಹಲವಾರು ಪಕ್ಷಗಳಲ್ಲಿ ಗುರುತಿಸಿಕೊಂಡಿರುವ ಕಾರಣ ಪೋಲೀಸರಿಗೆ ಒತ್ತಡ ಮಾಡಿ ಒಂದು ತಿಂಗಳ ನಂತರ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಆರೋಪಿ ಚಾಸಾ- 1 ರವರಿಂದ ಯಾವುದೇ ಮೋಬೈಲ್ ಫೋನ್ ಕಿತ್ತುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಎಂಒ–1 ಕಬ್ಬಿಣದ ರಾಡು ಎಂಒ–2, 3 ದೊಣ್ಣೆಗಳು, ಎಂಒ–4 ಕಲ್ಲು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಎಂಒ–1 ರಿಂದ 4 ವಸ್ತುಗಳನ್ನು ಗುರುತಿಸಲು ಯಾವುದೇ ನಿಖರವಾದ ಗುರುತು ಅದರಲ್ಲಿ ಇರುವುದಿಲ್ಲ. ಎಂಒ–1 ರಿಂದ 4 ವಸ್ತುಗಳನ್ನು ಹಲ್ಲೆಗೆ ಉಪಯೋಗಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**8.** ಪಾಂಡವಪುರ ಆಸ್ಪತ್ರೆಯಲ್ಲಿ ವೈದ್ಯರ ಬಳಿ ಯಾವ ವ್ಯಕ್ತಿ ಯಾವ ವಸ್ತುವಿನಿಂದ ಹೊಡೆದಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸರಿ. ದೇವೆಗೌಡನಕೊಪ್ಪಲು ಮತ್ತು ಅಕ್ಕಪಕ್ಕದ ಊರಿನವರು ನಮಗೆ ಪರಿಚಯಸ್ಥರು ಎಂದರೆ ಸರಿಯಲ್ಲ. ಆದಕಾರಣ ಅವರಿಂದ ಹೆಸರುಗಳನ್ನು ಬರೆಸಿಕೊಂಡು ಒಂದು ತಿಂಗಳ ನಂತರ ಆರೋಪಿತರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ- 1 ರವರು ನೀಡಿದ ಸುಳ್ಳು ದೂರಿಗೆ ಅವರಿಗೆ ಅನುಕೂಲವಾಗುವಂತೆ ಮತ್ತು ನನಗೂ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಾಬ್ತು ನಾನು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ.

9. **ಮರು ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ** ಇಲ್ಲ ಎಂದು ನುಡಿಯುತ್ತಾರೆ._

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**